ಒ.ಎಸ್.ನಂ. **190/20**

**ಪಿ. ಡಬ್ಲೂ-1**

**ದಿನಾಂಕಃ 25.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :-ಪ್ರತಿವಾದಿ ಪರ ವಕೀಲರಿಂದಃ-**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಖಾಲಿ ಜಾಗಕ್ಕೆ ದಾವೆ ಹೂಡಿರುತ್ತೇನೆ. ನಾನು 60 X 40 ಅಡಿ ವಿಸ್ತೀರ್ಣಕ್ಕೆ ದಾವೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತು ನಿಮಗೆ ಹೇಗೆ ಬಂತು ಎಂದರೆ ಗ್ರಾಮ ಠಾಣಾ ಜಮೀನು ಆಗಿದ್ದು ಮಂಡಲ ಪಂಚಾಯ್ತಿಯಿಂದ ನನ್ನ ಗಂಡನ ಹೆಸರಿಗೆ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಈಗ ಮೂಡಲಮಠದಲ್ಲಿ ವಾಸ ಇರುತ್ತೇನೆ. ಸದರಿ ಮೂಡಲಮಠದಲ್ಲಿ ನನಗೆ ಮನೆ ಇರುತ್ತದೆ. ಸದರಿ ನಾನು ವಾಸಿಸುತ್ತಿರುವ ಮನೆ ಯಾರ ಹೆಸರಿನಲ್ಲಿ ಇದೆ ಎಂದರೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅದರ ವಿಸ್ತೀರ್ಣ ಪೂರ್ವ, ಪಶ್ಚಿಮ 60 ಉತ್ತರ, ದಕ್ಷಿಣ 80 ಅಡಿ ಇರುತ್ತದೆ. ಸದರಿ ಮನೆಗೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿಲ್ಲ. ದಾವಾ ಸ್ವತ್ತು ನನ್ನ ಗಂಡನ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಮೂಡಲಮಠ ಪೂರ್ತಿ ಗ್ರಾಮ ಠಾಣೆ ಎಂದರೆ ಗೊತ್ತಿಲ್ಲ. ನಿಪಿ 6 ರಲ್ಲಿ ಏನು ಇದೆ ಎಂದರೆ ದೇವಸ್ಥಾನದ ಜಾಗ ಎಂದು ನುಡಿಯುತ್ತಾರೆ. ದೇವಸ್ಥಾನ ಜಾಗದಲ್ಲಿ ನಿಂತು ಪೋಟೋ ತೆಗೆಸಿ ಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಜಾಗ ಶ್ರೀಗುರು ಅಕ್ಕಿಪೇಟೆ ಸ್ವಾಮಿ ಗದ್ದಿಗೆಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಮುಂದವರೆದ ಶಾಂಭಶಿವ ರವರಿಗೆ ಸೇರಿದ ಜಾಗ ಎಂದು ನುಡಿಯುತ್ತಾರೆ.

ಮೂಡಲಮಠದಲ್ಲಿ ಶ್ರೀಗುರು ಅಕ್ಕಿಪೇಟೆ ಸ್ವಾಮಿ ಗದ್ದಿಗೆ ದೇವಸ್ಥಾನ ಇದೆ ಎಂದರೆ ಸರಿ. ಸದರಿ ಗದ್ದಿಗೆ ಮತ್ತು ಮಠ ಸುಮಾರು 1 ಎಕರೆ 8 ಗುಂಟೆ ಜಾಗದಲ್ಲಿ ಇದೆ ಎಂದರೆ ಶಾಂಭಸದಾಶಿವ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವಾಗ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಇದೆ ಎಂದು ತೋರಿಸಲು ಹಕ್ಕು ಪತ್ರ ಕಂದಾಯ ರಶೀದಿಗಳು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ

ಸ್ವತ್ತು ನನ್ನ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿಗೆ ಹಕ್ಕು ಪತ್ರವನ್ನು ಹಂಚಿಪುರ ಗ್ರಾಮ ಪಂಚಾಯ್ತಿ ಕೆಂಡಗಣ್ಣಪ್ಪ ಅವರು ನೀಡಿರುತ್ತಾರೆ. ನನ್ನ ಗಂಡನಿಗೆ ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಪತ್ರ ನೀಡಿರುವುದಿಲ್ಲ. ಮೂಡಲಮಠ ಪೂರ್ತಿ ಗ್ರಾಮ ಠಾಣಾ ಸ್ವತ್ತು ಎಂದರೆ ಸರಿ. ಗ್ರಾಮ ಠಾಣಾ ಸ್ವತ್ತನ್ನು ನಿವೇಶನಗಳಾಗಿ ಅಥವಾ ಮನೆಗಳಾಗಿ ನೀಡುವುದಿಲ್ಲ ಎಂದರೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**